**ಚಾಸಾ-1 ಪ್ರಾಸಾ-1**

**3ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**
**ಬೆಂಗಳೂರು ನಗರ.**
**ಸಿಸಿ. 6608/2018**

| | |
|---|---|
| **ಸಾಕ್ಷಿದಾರರ ಹೆಸರು** | ಗಂಗರಾಜು.ಹೆಚ್.ಡಿ. |
| **ತಂದೆಯ ಹೆಸರು** | ದೇವಣ್ಣ, |
| **ವಯಸ್ಸು** | 79 ವರ್ಷ, |
| **ಉದ್ಯೋಗ** | ಮಾಜಿ ಅಧ್ಯಕ್ಷರು, ಚಲನಚಿತ್ರ ವಾಣಿಜ್ಯ ಮಂಡಳಿ ಮತ್ತು ವ್ಯವಹಾರ. |
| **ವಾಸ** | ಮಾನ್ಯತಾ ಟೆಕ್ ಪಾರ್ಕ್, ಬೆಂಗಳೂರು. |
| **ಪ್ರಮಾಣೀಕರಿಸಿದ ದಿನಾಂಕ** | 16.03.2026. |

**ಮುಖ್ಯ ವಿಚಾರಣೆ : ಹಿ.ಸ ಸ. ಅಭಿಯೋಜಕರವರಿಂದ :**

ಈ ಪ್ರಕರಣದ ಆರೋಪಿ ನನಗೆ ಗೊತ್ತು. ಅದೇ ರೀತಿ ಚಾಸಾ-2 ರಿಂದ 11 ರವರು ಸಹ ಗೊತ್ತು. ಈ ಪ್ರಕರಣದಲ್ಲಿ ನನಗೆ ಏನು ಗೊತ್ತಿಲ್ಲ. ನಾನು ಆರೋಪಿಯ ವಿರುದ್ದ ಯಾವುದೇ ದೂರನ್ನು ನೀಡಿರುವುದಿಲ್ಲ. ಸಾಕ್ಷಿಯು ದೂರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ದೂರನ್ನು ನಿಪಿ.1 ಎಂದು, ಸಾಕ್ಷಿ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಸ್ಥಳ ಮಹಜರ್ ನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಸ್ಥಳ ಮಹಜರ್ ನ್ನು ನಿಪಿ.2 ಎಂದು, ಸಾಕ್ಷಿ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ತನ್ನ ಹೇಳಿಕೆಯನ್ನು ಅಲ್ಲೆಗೆಳೆದಿದ್ದರಿಂದ, ಸದರಿ ಹೇಳಿಕೆಯನ್ನು ನಿಪಿ.3 ಎಂದು ಗುರುತಿಸಲಾಯಿತು. ನನ್ನ ಮತ್ತು ಆರೋಪಿನ ನಡುವೆ ಹಣಕಾಸಿನ ವಿಚಾರದಲ್ಲಿ ಸಣ್ಣ ಪುಟ್ಟ ಮನಸ್ತಾಪ ಉಂಟಾಗಿದ್ದರಿಂದ ಪೊಲೀಸರು ತೋರಿಸಿದ ಎರಡು ದಾಖಲೆಗಳಿಗೆ ಸಹಿ ಮಾಡಿರುತ್ತೇನೆ ಮತ್ತು ನಿಪಿ.1 ರಿಂದ 3 ರಲ್ಲಿರುವ ವಿಚಾರ ನನಗೆ ಗೊತ್ತಿಲ್ಲ. ಈ ಸಂಬಂದ ಪೊಲೀಸರು ನನ್ನನ್ನು ವಿಚಾರಣೆ ಮಾಡಿರುವುದಿಲ್ಲ.

**(ಈ ಹಂತದಲ್ಲಿ ಹಿ.ಸ.ಸ.ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಪರಿಶೀಲಿಸಿ ಅನುಮತಿ ನೀಡಲಾಯಿತು.)**

**ಚಾಸಾ-1 ಪ್ರಾಸಾ-1**

**ಪಾಟೀ ಸವಾಲು : ಹಿ. ಸ. ಸ ಅಭಿಯೋಜಕರವರಿಂದ :**

ಆರೋಪಿಯು ಬೆಂಗಳೂರು ನಗರದ ಲಾಂಗ್ ಪೋರ್ಡ್ ರಸ್ತೆಯ ಆವೆನ್ಯೂ ರೋಡ್ ಕಟ್ಟಡದಲ್ಲಿರುವ ಶ್ರೇಯಾ ಇಕ್ವಿಪ್ ಮೆಂಟ್ ಪ್ರೈ.ಕಂಪನಿಯಲ್ಲಿ ಚರಾ ಸ್ವತ್ತುಗಳ ಮಾರಾಟ ಮತ್ತು ಡೆಲವರಿ ವಿಭಾಗದಲ್ಲಿ ಮ್ಯಾನೇಜರ್ ಆಗಿದ್ದರು ಎಂದರೆ ಸರಿಯಲ್ಲ. ಚಾಸಾ-16 ರವರಾದ ಶ್ರೀ.ವಲ್ಲಭ್.ಎಸ್. ರವರು ಸದರಿ ಕಂಪನಿಗೆ ಕರ್ನಾಟಕ ಪ್ರದೇಶದ ಮುಖ್ಯಸ್ಥರಾಗಿದ್ದು, ಆರೋಪಿಯು ಕಂಪನಿಯು ನೀಡಿರುವ ಸಾಲದ ಸುಸ್ಥಿದಾರರು ಅಡಮಾನ ಇಟ್ಟಿರುವ ಸ್ಥಿರಾಸ್ತಿಗಳ ವಿಲೇವಾರಿ ಮಾಡಲು ಜಿಪಿಎ ಅಧಿಕಾರವನ್ನು ನೀಡಿರುತ್ತದೆ ಎಂದು ನಕಲಿಯಾಗಿ ಸೃಷ್ಟಿ ಮಾಡಿಕೊಂಡು ನನ್ನನ್ನು ನಂಬಿಸಿ ಚಾಸಾ-13 ರವರ ಮಾಲೀಕತ್ವದಲ್ಲಿರುವ ಬೆಂಗಳೂರು ನಗರ ಮುನಿಸಿಪಾಲ್ ನಂ.10, ಹಳೆ ನಂಬರ್ -15, ಪಿಐಡಿ ನಂ.77-106-10 ಪೂರ್ಣ ಪ್ರಸಾದ್ ರಸ್ತೆಯಲ್ಲಿರುವ ರೂ.30 ರಿಂದ40 ಕೋಟಿ ಬೆಲೆಬಾಳುವ 8284.8 ಘನ ಮೀಟರ್ ಇರುವ ಕಟ್ಟಡವನ್ನು ಆರೋಪಿಗೆ ಸಂಬಂಧ ಪಟ್ಟಿಲ್ಲದೇ ಇದ್ದರೂ ಸಹ ಆರೋಪಿಯು ಅಕ್ರಮವಾಗಿ ಶಿಲ್ಪ ಗೌತಮ್ ಮತ್ತು ಚಾಸಾ-5 ಸುಮನ್ ರವರಿಗೆ ಮಾರಾಟ ಮಾಡುವುದಾಗಿ ದಿ.02.02.2016ರಂದು ಒಪ್ಪಂದ ಮಾಡಿಕೊಂಡು ನನ್ನ ಮೂಲಕ ಮುಂಗಡವಾಗಿ ಬೆಂಗಳೂರು ನಗರದ ಗಾಂಧಿನಗರದಲ್ಲಿರುವ ಆಂಧ್ರ ಬ್ಯಾಂಕ್ ಶಾಖೆಯ ಮೂಲಕ ಡಿಡಿ ಗಳ ಮೂಲಕ ರೂ.1ಕೋಟಿ ಹಣವನ್ನು ಮತ್ತು ಗಾಂಧಿನಗರದಲ್ಲಿರುವ ಐಡಿಬಿಐ ಬ್ಯಾಂಕಿನ ತಲಾ ರೂ.25ಲಕ್ಷದ ನಾಲ್ಕು ಡಿಡಿ ಗಳನ್ನು ಆರೋಪಿಯು ಪಡೆದುಕೊಂಡಿದ್ದ ಎಂದರೆ ಸರಿಯಲ್ಲ.

2. ನಾನು ಕೊಟ್ಟಿದ್ದ ಎರಡು ಕೋಟಿಗಳ ಡಿಡಿ ಗಳನ್ನು ಶ್ರೇಯಾ ಕಂಪನಿಗಳ ವಾಹನ ಮಾರಾಟ ದಿಂದ ಬಂದ ಹಣವೆಂದು ಬಿಂಬಿಸಿ ಶ್ರೇಯಾ ಕಂಪನಿಗೆ ಜಮಾ ಮಾಡಿ ನನಗೆ ನಂಬಿಕೆ ದ್ರೋಹ ಮತ್ತು ಮೋಸ ಉಂಟು ಮಾಡಿರುತ್ತಾನೆ ಎಂದರೆ ಸರಿಯಲ್ಲ. ಅದೇ ರೀತಿ ಆರೋಪಿಯು ನಕಲಿ ಜಿಪಿಎ ಯನ್ನು ನೈಜವಾದದ್ದು ಎಂದು ನಂಬಿಸಿರುತ್ತಾನೆ ಎಂದರೆ ಸರಿಯಲ್ಲ. ನನಗೆ ಈ ಪ್ರಕರಣದ ಬಗ್ಗೆ ಎಲ್ಲಾ ಗೊತ್ತಿದ್ದರು ನಿಪಿ.1 ರಂತೆ ದೂರನ್ನು ನೀಡಿದ್ದರೂ ಮತ್ತು ನಿಪಿ.2ರಂತೆ ಚಾಸಾ-2 ಮತ್ತು 3 ರವರ ಸಮಕ್ಷಮ ನಾನು ತೋರಿಸಿದಂತೆ ಮಹಜರ್ ಕ್ರಮ ಜರುಗಿಸಿದ್ದರು ಎಂದರೆ ಸರಿಯಲ್ಲ. ನಿಪಿ.1

**ಚಾಸಾ-1 ಪ್ರಾಸಾ-1**

ರಿಂದ 3 ರ ವಿಚಾರಗಳು ನನಗೆ ಗೊತ್ತಿದ್ದರು ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಶ್ರೀ.ಎ ಆರ್ ಹೆಚ್ ಆರೋಪಿ ಪರ ವಕೀಲರಿಂದ ಪಾಟೀಸವಾಲು ಏನು ಇಲ್ಲ ಎಂದು ತಿಳಿಸಿರುತ್ತಾರೆ. ಆದ್ದರಿಂದ ಪಾಟೀಸವಾಲು ಏನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರು ವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ.ಹೇ.ಕೇ.ಸ.ಇದೆ**

**3ನೇ ಎ.ಸಿ.ಜೆ.ಎಮ್.ನ್ಯಾ.**
**ಬೆಂಗಳೂರು.**

**ಚಾಸಾ-1 ಪ್ರಾಸಾ-1**

Accused present. CW-1 is present and examined as PW-1 and documents marked as Ex.P.1, 1a, 2, 2a, and 3.

CW-1 / PW-1 has turned hostile and has not supported the prosecution case. During course of cross examination of PW-1 by Ld.Sr.APP nothing has been elicited from his mouth.

Ld.Sr.APP prays for issuance of summons to other witnesses. No purpose will be served by issuing summons to the other witnesses. Hence, the prayer of Ld.Sr.APP is rejected and statement of accused under section 313 of Cr.P.C. is dispensed with.

Heard, the argument on both sides. For Judgment. Call on 01.04.2026.

III Addl.C.J.M, Bengaluru.